# ಪದ್ಯ ವಿಭಾಗ

# 1. ಹಡೆದವ್ವ

– ಜನಪದರು

(ಜನಸಾಮಾನ್ಯರು ರಚಿಸಿದ ಜನಪದ ಸಾಹಿತ್ಯ ವಿಪುಲವೂ ವೈವಿಧ್ಯಪೂರ್ಣವೂ ಆದೆ. ಜನಪದರು ತಮ್ಮ ಬದುಕಿನ ಅನುಭವಗಳಿಗೆ ಬಣ್ಣ ತುಂಬಿದ್ದು, ಆಕಾರ ನೀಡಿದ್ದು ಈ ಸಾಹಿತ್ಯದ ಮೂಲಕ. ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಪಾಮರ ಸಾಹಿತ್ಯವೆನಿಸಿದ ಇದರ ಸೃಷ್ಟಿಕಾರ್ಯ ಪುರುಷ ಹಾಗೂ ಮಹಿಳೆ ಇಬ್ಬರಿಂದಲೂ ನಡೆದಿದೆ. ಜನಪದ ಸಾಹಿತ್ಯದಲ್ಲಿ ತ್ರಿಪದಿಯೇ ಪ್ರಮುಖವಾದುದಾಗಿರುತ್ತದೆ. ಬಿಡಿರಚನೆಗಳಾದ ಈ ತ್ರಿಪದಿಯಲ್ಲಿ ಜನಪದರು ತಮ್ಮ ಬದುಕಿನ ಸರಸ-ವಿರಸ, ಸುಖ-ದುಃಖ, ನೊವು-ನಲಿವು, ಪ್ರೀತಿ-ವಾತ್ಸಲ್ಯ, ಆಸರಿಕೆ-ಬೇಸರಿಕೆ ಮೊದಲಾದ ಅನುಭವಗಳನ್ನು ಪ್ರಕಟಪಡಿಸಿದ್ದಾರೆ).

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ ।
ಕೂಸು ಕಂದಯ್ಯ ಒಳಹೊರಗ । ಆಡಿದರ ।
ಬೀಸಣಿಕೆ ಗಾಳಿ ಸುಳಿದಾವ ॥1॥

ತಂದೀಯ ನೆನೆದರ ತಂಗಳ ಬಿಸಿಯಾಯ್ತು ।
ಗಂಗಾದೇವಿ ನನ್ನ ಹಡೆದವ್ನ । ನೆನೆದರ ।
ಮಾಸೀದ ತಲೆಯು ಮಡಿಯಾಯ್ತು ॥2॥

ಹೆಣ್ಣಿದ್ದ ಮನೆಗೆ ಕನ್ನಡಿ ಯಾತಕ್ಕ ।
ಹೆಣ್ಣು ಸಣ್ಣವಳು ಒಳಗಿರಲು । ನನ ಮಗಳು ।
ಕನ್ನಡಿಯಂಗ ಹೊಳೆಯುವಳು ॥3॥

ಬಡವೆಯ ಮಕ್ಕಳು ನಡೆದರೆ ಸಂತೋಷ ।
ಹುಡಿಯಾಡಿ ಮನೆಗೆ ಬರುವಾಗ । ತಾಯಿಗೆ ।
ಬಡತನದ ಜಾನ ಮರೆಯಿತು ॥4॥

ಜನಕರಾಯನ ಮಗಳು ಬನಕ ತೊಟ್ಟಿಲ ಕಟ್ಟಿ ।
ಲವಕುಶರನ್ನು ತೂಗ್ಯಾಳೊ । ಸೀತಾದೇವಿ ।
ನಗುತ ವನವಾಸ ಕಳದಾಳ ॥5॥

ತಾಯವ್ವನ ಬೈಬ್ಯಾಡ ತಿಳಿಗೇಡಿ ನನ ತಮ್ಮ ।
ಬಾಳ ದಿನದಾಕಿ ಹಡೆದವ್ವಗ । ಬೈದರ ।
ಬಾಳ ಮರುಗ್ಯಾಳ ಮನದಾಗ ॥6॥



**ಶಬ್ದಗಳ ಅರ್ಥ:**

ಬೀಸಣಿಕೆ = ಗಾಳಿ ಹಾಕಿಕೊಳ್ಳುವ ಸಾಧನ; ಮಾಸಿದ = ಹೊಲಸಾದ; ಹುಡಿಯಾಡು = ದೂಳಿನಲ್ಲಿ ಆಡು;
ಮರುಗು = ಕಳವಳಗೊಳ್ಳು

## ಅಭ್ಯಾಸ

**ಪಠ್ಯಾಧಾರಿತ ಪದ್ಯವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಮಾಡಿರಿ.**

**ಕೃತಿ 1) ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**


1) ಕೂಸು ಇದ್ದ ಮನಿಗೆ ಯಾವುದು ಬೇಡ?

2) ಹಡೆದವ್ವನನ್ನು ಯಾವ ನದಿಗೆ ಹೋಲಿಸಲಾಗಿದೆ?

3) ಸೀತಾದೇವಿಯ ಮಕ್ಕಳು ಯಾರು?

4) ತಾಯವ್ವನು ಮರುಗಬಾರದೆಂದು ತಮ್ಮನು ಹೇಗೆ ನಡೆದುಕೊಳ್ಳಬೇಕು?

**ಕೃತಿ 2) ಪದ್ಯದಲ್ಲಿ ಬಂದಿರುವ ಗ್ರಾಮ್ಯ ಶಬ್ದಗಳನ್ನು ಹುಡುಕಿ ಬರೆಯಿರಿ.**




**ಕೃತಿ 3) I. ಮಗುವಿನ ಪ್ರೇಮವು ತಾಯಿಯ ಯಾವ ಯಾವ ಮಾತುಗಳಲ್ಲಿ ವ್ಯಕ್ತವಾಗಿವೆ ಬರೆಯಿರಿ.**

1) ........................................................................................................................

2) ........................................................................................................................

3) ........................................................................................................................

4) ........................................................................................................................

**II. ''ತಾಯಿಯೇ ದೇವರು'' ಈ ಹೇಳಿಕೆಯನ್ನು ನಿಮ್ಮ ಮಾತುಗಳಲ್ಲಿ 8 ರಿಂದ 10 ವಾಕ್ಯಗಳಲ್ಲಿ ಸ್ಪಷ್ಟಪಡಿಸಿರಿ.**

**III.**

1) ಜನಕ ರಾಜನ ಮಗಳು ಜಾನಕಿಯಾದರೆ

2) ದ್ರುಪದ ರಾಜನ ಮಗಳು ........................................

3) ಕುಂತಲ ರಾಜನ ಮಗಳು ........................................

4) ಗಾಂಧಾರ ರಾಜನ ಮಗಳು ........................................

**ಕೃತಿ 4) I. ಕೆಳಗೆ ಕೊಟ್ಟಿರುವ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.**

ಕೂಸು, ಮಾಸೀದ, ಹುಡಿಯಾಡಿ, ತೂಗ್ಯಾಳೂ, ಕಳದಾಳ ಮರಗ್ಯಾಳ

**II. ಕೆಳಗಿನ ಶಬ್ದಗಳಿಗೆ ತತ್ಸಮ ತದ್ಭವ ಬರೆಯಿರಿ.**

ರೂಪ, ವರುಷ, ಕಬ್ಬ, ಬ್ರಹ್ಮ

**III. ಉಪಸರ್ಗಯುಕ್ತ ಪದಗಳನ್ನು ಬರೆಯಿರಿ**

ಯೋಗ, ಬಲ, ಲೋಕ

**IV. ಕೆಳಗಿನ ವಾಕ್ಯದ ಪ್ರಯೋಗ ಬರೆಯಿರಿ**

ಲವಕುಶರು, ಕುದುರೆಯನ್ನು ಕಟ್ಟಿದರು.

**ಕೃತಿ 5) I. ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ ಭಾಷಣ ಸ್ಪರ್ಧೆಯಲ್ಲಿ ನೀವು ವಿಜೇತರಾದ ಬಗ್ಗೆ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.**

**II. ನಿನಗೆ ಗೊತ್ತಿರುವ ಯಾವುದಾದರೂ ಎರಡು ಜಾನಪದ ತ್ರಿಪದಿಗಳನ್ನು ಬರೆಯಿರಿ.**

***

8QD3SY